ಅಲ್ಲದೆ ಹಾಲಿ ಸಂಕೇಶ್ವರದಲ್ಲಿರುವ 33:11 ಕೆ.ವಿ. ವಿದ್ಯುತ್ ಸಬ್ ಸ್ಟೇಷನನ್ನು 110:11 ಕೆ.ವಿ. ದರ್ಜೆಗೆ ಉನ್ನತೀಕರಿಸಲು ಈಗಿರುವ ಸಬ್ ಸ್ಟೇಷನ್‌ನಲ್ಲಿ ಲಭ್ಯವಾಗುವ ಸ್ಥಳಾವಕಾಶದ ಬಗ್ಗೆ, ಪರಿಶೀಲಿಸಲಾಗುತ್ತಿದೆ. ಕಣಗಲಾದಲ್ಲಿ ಉದ್ದೇಶಿತ 33:11ಕೆ.ವಿ. ಸಬ್ ಸ್ಟೇಷನನ್ನು ಸ್ಥಾಪಿಸಲು ಬೇಕಾಗುವ ಸೂಕ್ತವಾದ ಭೂಮಿಯನ್ನು ಗುರುತಿಸಬೇಕಾಗಿರುತ್ತದೆ.

ದಡ್ಡಿಯಲ್ಲಿ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನನ್ನು ಸ್ಥಾಪಿಸುವ ಬಗ್ಗೆ ನಿಗಮದ ತಾಂತ್ರಿಕ ಸಮಿತಿಯು ತೆಗೆದುಕೊಳ್ಳುವ ತೀರ್ಮಾನದ ಪ್ರಕಾರ ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದರಿಂದ, ಈಗಲೇ ಈ ವಿಷಯದ ಬಗ್ಗೆ ನಿಖರವಾಗಿ ತಿಳಿಸಲು ಸಾಧ್ಯವಿರುವುದಿಲ್ಲ.

ಹುಕ್ಕೇರಿ ತಾಲ್ಲೂಕಿನ ಸಲಮವಾಡಿ ಏತ ನೀರಾವರಿ ಯೋಜನೆ

5031 - ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ (ಸಂಕೇಶ್ವರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಲಮವಾಡಿ ಏತ ನೀರಾವರಿ ಯೋಜನೆಯನ್ನು ಎಂದು ಪ್ರಾರಂಭ ಮಾಡಲಾಗಿದೆ?*

ಆ) *ಈ ಕಾಮಗಾರಿಗೆ ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?*

ಇ) *ಈ ಸಾಲಿನಲ್ಲಿ ಈ ಯೋಜನೆಗೆ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ?*

ಈ) *ಈ ಯೋಜನೆಯನ್ನು ಪೂರ್ತಿಗೊಳಿಸಲು ಇನ್ನೂ ಬೇಕಾಗಿರುವ ಕಾಲಾವಧಿ ಎಷ್ಟು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಹುಕ್ಕೇರಿ ತಾಲ್ಲೂಕಿನ ಸಲಮವಾಡಿ ಏತ ನೀರಾವರಿ ಯೋಜನೆ 5.70 ಲಕ್ಷ ರೂ.ಗಳಿಗೆ ತಾಂತ್ರಿಕ ಮಂಜೂರಾತಿಯನ್ನು 1975-76 ಸಾಲಿನಲ್ಲಿ ಪಡೆಯಲಾಯಿತು. ಈ ಯೋಜನೆಯನ್ನು 1979ರಲ್ಲಿ ಸಹಕಾರ ಸಂಘದ ಠೇವಣಿ ವಂತಿಕೆ ಅಡಿಯಲ್ಲಿ ಚಿಕ್ಕೋಡಿ ಲೋಕೋಪಯೋಗಿ ವಿಭಾಗದಿಂದ ಪ್ರಾರಂಭಿಸಲಾಗಿತ್ತು. ಅವರು ಭಾಗಶಃ ಕೆಲಸ ಮಾಡಿ ಈ ಯೋಜನೆಗೆ ಬೇಕಾದ ಯಾವುದೇ ಹಣ ಡಿಪಾಜಿಟ್ ಮಾಡದೇ ಇದ್ದುದರಿಂದ ಕೆಲಸ ಸ್ಥಗಿತಗೊಂಡಿತ್ತು. ಬಾಕಿ ಉಳಿದ ಕಾಮಗಾರಿಗಳ ರೂ. 22.50 ಲಕ್ಷ ಅಂದಾಜು ತಯಾರಿಸಿ12:1992ರಲ್ಲಿ ಮಂಜೂರಾತಿ ಪಡೆಯಲಾಗಿತ್ತು. ಈ ಕಾಮಗಾರಿಯನ್ನು ಸರ್ಕಾರವೇ ವಹಿಸಿ ಮುಗಿಸಿಕೊಡುವ ಉದ್ದೇಶದಿಂದ ದಿನಾಂಕ17.10.96ರಲ್ಲಿ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿತ್ತು.

ಆ) 6.68 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಇ) ಪ್ರಸಕ್ತ ಸಾಲಿನಲ್ಲಿ 0.70 ಲಕ್ಷ ರೂಪಾಯಿ ಅನುದಾನವಿರುತ್ತದೆ.

ಈ) ಸಂಬಂಧಿಸಿದ ಗುತ್ತಿಗೆದಾರ ಕೆಲಸ ಮಾಡದಿದ್ದರಿಂದ ಅವರ ಗುತ್ತಿಗೆಯನ್ನು ರಿಸ್ಕ್ ಮತ್ತು ಕಾಸ್ಟ್ ಮೇಲೆ ಮೊಟಕುಗೊಳಿಸಿ ಮರು ಟೆಂಡರ್ ಪಡೆದು ಬೇರೆ ಗುತ್ತಿಗೆದಾರರ ಮೂಲಕ ಕಾಮಗಾರಿ ಮುಗಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.